ಸುಮ್ಮನೆ ಎಂದರೆ ಸುಮ್ಮನೇ ಅವನನ್ನ ನೋಡುತ್ತಾ ನಿಂತುಬಿಟ್ಟಳು. ಸುಹಾಸ ಒಂದೊಂದೇ ಅಂಗಡಿಗಳನ್ನು ದಾಟುತ್ತಾ ತನಗೆ ಬೇಕಿದ್ದು ಬೇಡದ್ದು ಎಲ್ಲವನ್ನೂ ತೆಗೆದುಕೊಳ್ಳುತ್ತಿದ್ದರೂ ಅಂಜಲಿ ಮಾತ್ರ ತಡೆಯಲಿಲ್ಲ.

ಬಹುಶಃ ಹೀಗೆ ಸುಹಾಸ ಸಿಕ್ಕಿದ್ದೆಲ್ಲವನ್ನೂ ಮಾರುಕಟ್ಟೆಯ ಕೊಳ್ಳುಬಾಕತನದವನಂತೆ ಕೊಂಡು ಕೊಳ್ಳುವುದನ್ನು ನೋಡಿದ್ದರೆ ಮನೋಹರನಿಗೆ ಇಷ್ಟವಾಗುತ್ತಿರಲಿಲ್ಲ ಎನ್ನುವ ಆಲೋಚನೆಯೊಂದು ಥಟ್ಟೆಂದು ಹೊಳೆದುಹೋಯ್ತು ಕ್ಷಣಾರ್ಧದಲ್ಲಿ. ಮನೋಹರ ಅಂಜಲಿಯನ್ನು ಮೆಚ್ಚಿದ ಹುಡುಗ ಮತ್ತು ಸುಹಾಸನ ಅಪ್ಪ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ ಓದುವಾಗಲೇ ವಿದ್ಯಾರ್ಥಿ ಸಂಘಟನೆಗಳಲ್ಲಿ ನಾಯಕನಾಗಿ ಗುರುತಿಸಿಕೊಂಡಿದ್ದ ಮನೋಹರ ಕಾಲೇಜಿನ ಒಳಗಿರದೆ ಸದಾ ಹೊರಗೇ ಇರುತ್ತಿದ್ದ. ಕಾಲೇಜು ವಿದ್ಯಾರ್ಥಿಗಳ ಬಸ್ ಪಾಸ್ ಬೆಲೆಯನ್ನು ಹೆಚ್ಚಿಸಿದ್ದಕ್ಕೆ ಸರ್ಕಾರದ ವಿರುದ್ಧ ಘೋಷಣೆ ಕೂಗುವುದು, ಹಾಸ್ಟೆಲ್ ಊಟದಲ್ಲಿ ಕಸ ಸಿಕ್ಕಿದ್ದಕ್ಕೆ ಯೂನಿವರ್ಸಿಟಿಯ ಮುಖ್ಯ ಕಚೇರಿಯ ಎದುರು ಉಳಿದ ವಿದ್ಯಾರ್ಥಿಗಳೊಂದಿಗೆ ಧರಣಿ ಕೂರುವುದು, ಇನ್ನೆಲ್ಲೋ ಜಾಗತಿಕ ಕಾರಣಕ್ಕೆ ಎರಡು ದೇಶಗಳ ನಡುವೆ ಯುದ್ಧವಾದರೆ ಅಮಾಯಕ ದೇಶದ ಪರ ತಾನಿರುವ ಕಡೆಯೇ ಸಂವಾದ ಏರ್ಪಡಿಸುವುದು ಹೀಗೆ ಮನೋಹರನ ಚಟುವಟಿಕೆಗಳೇ ಕಾಲೇಜಿಗೆ ದೊಡ್ಡ ಸಮಸ್ಯೆಯಾಗಿತ್ತು. ಕಾಲೇಜಿನಲ್ಲಿ ಯಾವುದಾದರೂ ಹೊಸದೊಂದು ನೀತಿಯನ್ನು ಜಾರಿಗೊಳಿಸಬೇಕಾದರೂ ಶಿಕ್ಷಕರೆಲ್ಲರೂ ಆಫೀಸ್ ರೂಮಿನಲ್ಲಿ ಕನಿಷ್ಠ ಒಂದು ತಾಸಾದರೂ ಈ ಹೊಸ ನೀತಿಗೆ ಮನೋಹರ ಹೇಗೆ ಪ್ರತಿಕ್ರಿಯಿಸಬಹುದು ಎನ್ನುವ ಚರ್ಚೆಯನ್ನು ಭಯದಿಂದಲೇ ನಡೆಸಬೇಕಾಗುತ್ತಿತ್ತು.

ಅದೊಂದು ದಿನ ಮೈಸೂರಿನಿಂದ ಇಪ್ಪತ್ತೈದು ಕಿಲೋಮೀಟರ್ ದೂರದಲ್ಲಿರುವ ಹರಿಹರಪುರ ಎನ್ನುವ ಹಳ್ಳಿಯೊಂದರಲ್ಲಿ ಸರ್ಕಾರ ಉಷ್ಣ ವಿದ್ಯುತ್ ಸ್ಥಾವರವೊಂದನ್ನು ಸ್ಥಾಪಿಸಲು ನಿರ್ಧರಿಸಿದ್ದ ಸುದ್ದಿಯೊಂದು ಪತ್ರಿಕೆಯ ಮೊದಲ ಪುಟದಲ್ಲೇ ಕಾಣಿಸಿಕೊಂಡಿತ್ತು. ಸಣ್ಣ ಕುರುಚಲು ಕಾಡುಗಳ ಅಂಚಿನಲ್ಲಿರುವ ಹರಿಹರಪುರದಲ್ಲಿ ವರ್ಷಕ್ಕೆ ಒಂದಿಷ್ಟು ಭತ್ತ ಮತ್ತು ತರಕಾರಿ ಬೆಳೆಯುವ ರೈತರಿದ್ದರೇ ಹೊರತು ದೊಡ್ಡಮಟ್ಟದ ಕೃಷಿಕರು ಇರಲಿಲ್ಲ. ಆದರೆ ಭೂಮಿ ಮಾತ್ರ ಫಲವತ್ತಾಗಿತ್ತು.

ಇದೇ ಕಾರಣಕ್ಕೆ ಸರ್ಕಾರವೂ ಇದೇ ಊರನ್ನು ಆರಿಸಿಕೊಂಡಿತ್ತು. ಅಂದಿನ ಪತ್ರಿಕೆ ಓದಿದ ಎಲ್ಲರಿಗೂ ಅದೊಂದು ಸಹಜ ಸುದ್ದಿಯಾದರೆ ಮನೋಹರನಿಗೆ ಮಾತ್ರ ಇದೊಂದು ರೈತ ವಿರೋಧಿ ನಿರ್ಧಾರ ಎನ್ನುವುದರಿಂದ ಆರಂಭವಾಗಿ ನಿಸರ್ಗದ ಜೀವಕೋಟಿ, ಸಸ್ಯ ಸಂಪತ್ತು, ಪ್ರಾಣಿ- ಪಕ್ಷಿ ಸಂಕುಲ ಸೇರಿದಂತೆ ಪರಿಸರವನ್ನು ಸಂಪೂರ್ಣವಾಗಿ ನಾಶ ಮಾಡುವ ಕ್ರಿಯೆಯಾಗಿ ಕಾಣಿಸಿಕೊಂಡಿತ್ತು.

ಅದೇ ದಿನ ಕ್ಯಾಂಟೀನ್‌ನಲ್ಲಿ ಎಲ್ಲರ ಎದುರು ಸಂಜೆಯೊಳಗೆ ಸರ್ಕಾರದ ಈ ನಡೆಯ ವಿರುದ್ಧ ಹೊಸ ಆಂದೋಲನವನ್ನು ಆರಂಭಿಸುವ ಸಲುವಾಗಿ ಎಲ್ಲರೂ ಕೈ ಜೋಡಿಸಬೇಕು ಎನ್ನುವುದರೊಂದಿಗೆ ಹರಿಹರಪುರದಂಥ ಸಣ್ಣ ಗ್ರಾಮಗಳಲ್ಲಿ ನೂರಾರು ಎಕರೆ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ಮೂಲಕ ಸರ್ಕಾರವೇ ಹೇಗೆ ರೈತರನ್ನು ನಿರ್ಗತಿಕರನ್ನಾಗಿಸುತ್ತಿದೆ, ಸ್ಥಾವರದಲ್ಲಿ ವಿದ್ಯುತ್ ಉತ್ಪಾದನೆಗೆ ಬಳಸುವ ಕಲ್ಲಿದ್ದಲನ್ನು ಬಾಯ್ಲರ್‌ಗೆ ಹಾಕಿದಾಗ ಹೊರಸೂಸುವ ಹಾರುಬೂದಿಯ ನಿಯಂತ್ರಣ ಎನ್ನುವುದು ಎಷ್ಟು ಕಷ್ಟ, ದಿನಕ್ಕೆ ಸುಮಾರು ಎಂಟು ಸಾವಿರ ಟನ್‌ನಷ್ಟು ಹಾರುಬೂದಿ ಗಾಳಿಗೆ ಸೇರುವ ಮೂಲಕ ಉಂಟಾಗುವ ಪರಿಣಾಮದೊಂದಿಗೆ ಅದರ ವಿಲೇವಾರಿ ವೈಜ್ಞಾನಿಕವಾಗಿ ನಡೆಯದೇ ಇದ್ದರೆ ಕೃಷಿಯಲ್ಲಿ ಹೇಗೆ ಇಳುವರಿ ವ್ಯತ್ಯಯ ಉಂಟಾಗುತ್ತದೆ ಎನ್ನುವವರೆಗೆ ಸುದೀರ್ಘವಾಗಿ ಮಾತನಾಡಿದ.

ಸಂಜೆಯ ಹೊತ್ತಿಗೆ ಕಾಲೇಜಿನ ಒಂದಿಷ್ಟು ಹುಡುಗರು ಮೈದಾನದಲ್ಲಿ ಸೇರಿದ್ದರು. ಕೆಂಡದ ಉಂಡೆಗಳಂತೆ ಉರಿಯುತ್ತಿದ್ದ ಕೆಂಪು ಕಣ್ಣಿನ ಮನೋಹರನನ್ನು ಅದೇ ಮೊದಲು ಅಂಜಲಿ ನೋಡಿದ್ದು. ಹೋರಾಟ, ಸಿದ್ಧಾಂತ ಈ ಯಾವುದರ ಸೆಳೆತವೂ ಇಲ್ಲದ ಅಂಜಲಿ ಯಾರೋ ಕೇಳಿದರೆಂದು ನಾಳೆ ನಡೆಯುವ ಧರಣಿಗೆ ಪ್ಲಾಕಾರ್ಡ್‌ಗಳನ್ನು ಬರೆಯಲು ಹೋಗಿದ್ದಳು. ಕೆಂಪು ಬಣ್ಣದ ಶಾಯಿಯಲ್ಲಿ "ಸರ್ಕಾರಕ್ಕೆ ಧಿಕ್ಕಾರ", "ನಿಲ್ಲಿಸಿ ನಿಲ್ಲಿಸಿ ವಿದ್ಯುತ್ ಸ್ಥಾವರ ಯೋಜನೆ ನಿಲ್ಲಿಸಿ", "ಹಳ್ಳಿಗಳನ್ನು ಉಳಿಸಿ" ಹೀಗೆ ಅನೇಕ ಘೋಷಣೆಗಳನ್ನು ಅಕ್ಷರಕ್ಕಿಳಿಸುವಾಗ ಅಂಜಲಿಗೆ ಹೊಸದೊಂದು